# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1477
2. ಸದಸ್ಯರ ಹೆಸರು : ಶ್ರೀ ಕೇಶವ ಪ್ರಸಾದ್ ಎಸ್., (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ಸಚಿವರು : ಮಾನ್ಯ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಹಾಗೂ ಪ್ರವಾಸೋದ್ಯಮ ಸಚಿವರು
4. ಉತ್ತರಿಸುವ ದಿನಾಂಕ : 20/03/2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ಏರಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br>ಕಳೆದ 2 ವರ್ಷದಿಂದ ಎಷ್ಟು ಪ್ರಕರಣಗಳು ವರದಿಯಾಗಿವೆ; (ಜಿಲ್ಲಾವಾರು ವಿವರ ನೀಡುವುದು) | ಹೌದು<br><br>ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ 2023 ಮತ್ತು 2024 ರ ವರ್ಷಗಳಲ್ಲಿ ಒಟ್ಟು 9509 ಪ್ರಕರಣಗಳು ದಾಖಲಾಗಿರುತ್ತವೆ.<br><br>ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ | ಮಾನವ ಹಕ್ಕುಗಳ ಪ್ರಕರಣಗಳು ಹೆಚ್ಚಳವಾಗಲು ಕಾರಣಗಳೇನು; ಈ ಕುರಿತು ಪರಿಶೀಲನೆ ನಡೆದಿದೆಯೇ; (ವಿವರ ನೀಡುವುದು) | **ಈ ಕೆಳಕಂಡ ಕಾರಣಗಳಿಂದ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿವೆ.**<br><br>• ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸಲು ಕೈಗೊಳ್ಳುತ್ತಿರುವ ಕ್ರಮಗಳಿಂದ ಜನರಲ್ಲಿ ಮಾನವ ಹಕ್ಕುಗಳ ಬಗ್ಗೆ ಹೆಚ್ಚಿನ ಅರಿವು ಮತ್ತು ಜಾಗೃತಿ ಮೂಡಿರುವ ಕಾರಣ ಜನರಿಂದ ಮಾನವ ಹಕ್ಕುಗಳ ಪ್ರಕರಣಗಳು ಹೆಚ್ಚಾಗಿ ದಾಖಲಾಗುತ್ತಿದೆ.<br>• ಆಯೋಗದ ಜಿಲ್ಲೆಗಳಲ್ಲಿನ ಸಿಟ್ಟಿಂಗ್ಸ್ ಸಂದರ್ಭದಲ್ಲಿ ಸ್ಥಳೀಯ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರವಾಗಿ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮತ್ತು ಜಾಗೃತಿ ಮೂಡಿರುವುದು.<br>• ಆಯೋಗದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು ವಿವಿಧ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಸಿಟ್ಟಿಂಗ್ಸ್ ನಡೆಸುವುದಲ್ಲದೆ, ಸಾರ್ವಜನಿಕರಿಂದ ಅಹವಾಲು / ದೂರುಗಳನ್ನು ಸ್ವೀಕರಿಸಿ ಸಾಧ್ಯವಾದ ಮಟ್ಟಿಗೆ ಸ್ಥಳದಲ್ಲೇ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಕ್ರಮ ಜರುಗಿಸಲಾಗುತ್ತಿರುವುದು.<br>• ಮಾಧ್ಯಮಗಳಲ್ಲಿ ವರದಿಯಾದಂತಹ ಗಂಭೀರ ಪ್ರಕರಣಗಳಲ್ಲಿ ಆಯೋಗದ ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಸದಸ್ಯರು ಸ್ಥಳ ಭೇಟಿ ನೀಡಿ ಪ್ರಕರಣಗಳನ್ನು ಪರಿಶೀಲಿಸಿ ಕ್ರಮ ಜರುಗಿಸಲಾಗುತ್ತಿದೆ. ಸದರಿ ವಿಷಯವು ಮಾಧ್ಯಮಗಳಲ್ಲಿ ಪ್ರಚಾರವಾದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಲ್ಲಿ ಮಾನವ ಹಕ್ಕುಗಳ ಕುರಿತು ಹೆಚ್ಚಿನ ಜಾಗೃತಿ ಮೂಡಿರುವುದು. |

| | | |
|---|---|---|
| | | • ಮಾನವ ಹಕ್ಕುಗಳ ರಕ್ಷಣೆ ಕುರಿತು ಸಾರ್ವಜನಿಕರಲ್ಲಿ ಅರಿವು – ಜಾಗೃತಿ ಮೂಡಿಸುವ ಕಿರುಪುಸ್ತಕಗಳು, ಕರಪತ್ರಗಳು ಇತ್ಯಾದಿಗಳನ್ನು ಉಚಿತವಾಗಿ ಹಂಚಲಾಗುತ್ತಿರುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್‌ಗಳನ್ನು ಪ್ರದರ್ಶಿಸಲಾಗುತ್ತಿರುವುದು.<br><br>ಮುಂದುವರೆದು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಈ ರೀತಿ ದಾಖಲಾಗುವ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳ ಬಗ್ಗೆ ನಿತ್ಯ ಪರಿಶೀಲನೆ ನಡೆಸಿ ಪರಿಹಾರಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. |
| ಇ) | ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ, ದೂರುಗಳನ್ನು ಸ್ವೀಕರಿಸಲು ಮತ್ತು ದೂರುಗಳಿಗೆ ಪರಿಹಾರ ಕಲ್ಪಿಸಲು ಮಾಡಿರುವ ವ್ಯವಸ್ಥೆಗಳೇನು; ಈವರೆಗೆ ಎಷ್ಟು ದೂರುಗಳಿಗೆ ಪರಿಹಾರ ಕಲ್ಪಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಮಾನವ ಹಕ್ಕುಗಳ ಉಲ್ಲಂಘನೆ ದೂರುಗಳನ್ನು ದೂರುದಾರರು ಅಥವಾ ಅವರ ಪರವಾದ ವ್ಯಕ್ತಿಗಳು ಆಯೋಗಕ್ಕೆ ಖುದ್ದಾಗಿ ಭೇಟಿ ನೀಡಿ ಅಥವಾ ಅಂಚೆ ಮೂಲಕ ದೂರು ದಾಖಲಿಸಬಹುದು. ಮುಂದುವರೆದು, ಆಯೋಗದ ಅಧಿಕೃತ ಜಾಲತಾಣಕ್ಕೆ ಭೇಟಿ ನೀಡಿ ಅಥವಾ ಹೆಚ್.ಆರ್.ಸಿ ನೆಟ್ ಪೋರ್ಟಲ್ ನಲ್ಲಿ ಹಾಗೂ ಮೊಬೈಲ್ ಆಪ್ ಮೂಲಕ ದೂರನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.<br><br>ಮಾಧ್ಯಮಗಳಲ್ಲಿ ವರದಿಯಾಗುವಂತಹ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಆಧರಿಸಿ ಆಯೋಗವು ಸ್ವಯಂ ಪ್ರೇರಿತ ದೂರುಗಳನ್ನು ಸಹ ದಾಖಲಿಸಲಾಗುತ್ತಿದೆ.<br><br>ಆಯೋಗದಲ್ಲಿ ದಾಖಲಾದ ಮಾನವ ಹಕ್ಕುಗಳ ಉಲ್ಲಂಘನೆ ದೂರುಗಳನ್ನು ಆಯೋಗದ ಸಂಬಂಧಪಟ್ಟ ಪೀಠಗಳಲ್ಲಿ ಪರಿಶೀಲಿಸಿ ಸಕ್ಷಮ ಪ್ರಾಧಿಕಾರಿಗಳಿಂದ ವರದಿ ಪಡೆದು ಮತ್ತು ಸಂತ್ರಸ್ತರ ಅಹವಾಲುಗಳನ್ನು ಪರಿಗಣಿಸಿ, ಸಾಕ್ಷಿಗಳು ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ವೈಯಕ್ತಿಕ ಹೇಳಿಕೆಗಳನ್ನು ಪಡೆದು ಹಾಗೂ ವಿಧಿ ವಿಜ್ಞಾನ ತಜ್ಞರಿಂದ ವರದಿ ಪಡೆದು ಸಮಗ್ರವಾಗಿ ವಿಚಾರಣೆ ಕೈಗೊಂಡು, ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುತ್ತಿದೆ. ಸಂತ್ರಸ್ತರಿಗೆ ಕಾನೂನು ಪ್ರಕಾರ ಪರಿಹಾರ ಪಾವತಿಸಲು ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗೆ ಕಾರಣರಾದ ಸಾರ್ವಜನಿಕ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಕ್ರಮ ಜರುಗಿಸಲು ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.<br><br>ಕಳೆದ 2 ವರ್ಷಗಳಲ್ಲಿ 80 ಪ್ರಕರಣಗಳಲ್ಲಿ ಪರಿಹಾರ ನೀಡಲು ಶಿಫಾರಸ್ಸು ಮಾಡಲಾಗಿದೆ.<br><br>ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಆಯೋಗದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು ಜಿಲ್ಲೆಗಳಿಗೆ ಪ್ರವಾಸವನ್ನು ಕೈಗೊಂಡ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆದು ಮಾನವ ಹಕ್ಕುಗಳ ಬಗ್ಗೆ ಹೆಚ್ಚಿನ ಅರಿವು/ಜಾಗೃತಿ ಮೂಡಿಸುವುದರೊಂದಿಗೆ ಮಾನವ ಹಕ್ಕುಗಳ ಉಲ್ಲಂಘನೆಯಾಗದ ರೀತಿಯಲ್ಲಿ ಕರ್ತವ್ಯ ನಿರ್ವಹಿಸಲು ಉತ್ತೇಜಿಸಲಾಗುತ್ತಿದೆ.<br>ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಪೊಲೀಸ್ ಹಾಗೂ ಇತರೆ ತರಬೇತಿ ಸಂಸ್ಥೆಗಳಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಮಾನವ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.<br><br>ಪ್ರತಿ ವರ್ಷ ಮಾನವ ಹಕ್ಕುಗಳ ದಿನಾಚರಣೆಯ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಮತ್ತು ಕಾನೂನು ಪದವಿ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಆಚರಣೆ ಮಾಡಿ ಜಾಗೃತಿ ಮೂಡಿಸುವ ಮೂಲಕ ಕೂಡ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ಮಿತಿಗೊಳಿಸಲು ಅನುಕೂಲವಾಗುತ್ತಿದೆ. |

ಸಂ: ಲಾ ಹೆಚ್‌ಆರ್‌ಎಮ್/50/2025

(ಹೆಚ್.ಕೆ. ಪಾಟೀಲ)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು, ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

## ಅನುಬಂಧ-2

| ಕ್ರ. ಸಂ. | ಜಿಲ್ಲೆಗಳು | ಒಟ್ಟು |
|---|---|---|
| 1 | ಬೆಂಗಳೂರು ನಗರ | 17 |
| 2 | ಬಳ್ಳಾರಿ | 5 |
| 3 | ಬೆಳಗಾವಿ | 1 |
| 4 | ಬಾಗಲಕೋಟೆ | 3 |
| 5 | ಚಿತ್ರದುರ್ಗ | 1 |
| 6 | ಚಿಕ್ಕಮಗಳೂರು | 1 |
| 7 | ಚಿಕ್ಕಬಳ್ಳಾಪುರ | 1 |
| 8 | ಚಾಮರಾಜನಗರ | 3 |
| 9 | ದಾವಣಗೆರೆ | 2 |
| 10 | ದಾರವಾಡ | 2 |
| 11 | ದಕ್ಷಿಣ ಕನ್ನಡ | 1 |
| 12 | ಗದಗ | 1 |
| 13 | ಹಾಸನ | 1 |
| 14 | ಹಾವೇರಿ | 1 |
| 15 | ಕಲಬುರ್ಗಿ | 1 |
| 16 | ಕೋಲಾರ | 3 |
| 17 | ಕೊಡಗು | 2 |
| 18 | ಮೈಸೂರು | 9 |
| 19 | ಮಂಡ್ಯ | 3 |
| 20 | ಶಿವಮೊಗ್ಗ | 2 |
| 21 | ತುಮಕೂರು | 16 |
| 22 | ಉತ್ತರ ಕನ್ನಡ | 2 |
| 23 | ಉಡುಪಿ | 1 |
| 24 | ಯಾದಗಿರಿ | 1 |
| ಒಟ್ಟು ಸಂಖ್ಯೆ | | 80 |

ಅನುಬಂಧ–1

| ಕ್ರಮ ಸಂಖ್ಯೆ | ಜಿಲ್ಲೆಗಳು | 2023 ರಲ್ಲಿ ದಾಖಲಾದ ಪ್ರಕರಣಗಳು | 2024 ರಲ್ಲಿ ದಾಖಲಾದ ಪ್ರಕರಣಗಳು | ಒಟ್ಟು |
|---|---|---|---|---|
| 1 | ಬೆಂಗಳೂರು ನಗರ | 1515 | 2022 | 3537 |
| 2 | ಬೆಂಗಳೂರು ಗ್ರಾಮಾಂತರ | 115 | 131 | 246 |
| 3 | ಬಳ್ಳಾರಿ | 76 | 100 | 176 |
| 4 | ಬೆಳಗಾವಿ | 136 | 231 | 367 |
| 5 | ಬಾಗಲಕೋಟೆ | 67 | 74 | 141 |
| 6 | ಬೀದರ್ | 59 | 92 | 151 |
| 7 | ಚಿತ್ರದುರ್ಗ | 54 | 53 | 107 |
| 8 | ಚಿಕ್ಕಮಗಳೂರು | 82 | 117 | 199 |
| 9 | ಚಿಕ್ಕಬಳ್ಳಾಪುರ | 83 | 82 | 165 |
| 10 | ಚಾಮರಾಜನಗರ | 58 | 51 | 109 |
| 11 | ದಾವಣಗೆರೆ | 66 | 133 | 199 |
| 12 | ದಾರವಾಡ | 112 | 122 | 234 |
| 13 | ದಕ್ಷಿಣ ಕನ್ನಡ | 103 | 114 | 217 |
| 14 | ಗದಗ | 35 | 55 | 90 |
| 15 | ಹಾಸನ | 124 | 136 | 260 |
| 16 | ಹಾವೇರಿ | 40 | 48 | 88 |
| 17 | ಕಲಬುರ್ಗಿ | 98 | 149 | 247 |
| 18 | ಕೋಲಾರ | 111 | 140 | 251 |
| 19 | ಕೊಪ್ಪಳ | 59 | 84 | 143 |
| 20 | ಕೊಡಗು | 54 | 31 | 85 |
| 21 | ಮೈಸೂರು | 263 | 253 | 516 |
| 22 | ಮಂಡ್ಯ | 99 | 110 | 209 |
| 23 | ರಾಯಚೂರು | 38 | 86 | 124 |

| ಕ್ರಮ ಸಂಖ್ಯೆ | ಜಿಲ್ಲೆಗಳು | 2023 ರಲ್ಲಿ ದಾಖಲಾದ ಪ್ರಕರಣಗಳು | 2024 ರಲ್ಲಿ ದಾಖಲಾದ ಪ್ರಕರಣಗಳು | ಒಟ್ಟು |
|---|---|---|---|---|
| 24 | ರಾಮನಗರ | 75 | 108 | 183 |
| 25 | ಶಿವಮೊಗ್ಗ | 111 | 134 | 245 |
| 26 | ತುಮಕೂರು | 239 | 289 | 528 |
| 27 | ಉತ್ತರ ಕನ್ನಡ | 74 | 101 | 175 |
| 28 | ಉಡುಪಿ | 35 | 56 | 91 |
| 29 | ವಿಜಯಪುರ | 89 | 123 | 212 |
| 30 | ವಿಜಯನಗರ | 64 | 71 | 135 |
| 31 | ಯಾದಗಿರಿ | 28 | 51 | 79 |
| **ಒಟ್ಟು ಸಂಖ್ಯೆ** | | **4162** | **5347** | **9509** |